ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಶೈಶಾ-04/ಯುಸಂಸ್ಪ/2016-17

ನಿರ್ದೇಶಕರ ಕಛೇರಿ.
ಪದವಿ ಪೂರ್ವ ಶಿಕ್ಷಣ ಇಲಾಖೆ
ಸಂಪಿಗೆ ರಸ್ತೆ. 18ನೇ ಕ್ರಾಸ್
ಮಲ್ಲೇಶ್ವರಂ. ಬೆಂಗಳೂರು-12
ದಿನಾಂಕ: 5 -12-2016.

**ಸುತ್ತೋಲೆ**

ವಿಷಯ: 2016-17 ನೇ ಸಾಲಿನಲ್ಲಿ ಜಿಲ್ಲಾ ಮಟ್ಟದಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ **"ಯುವ ಸಂಸತ್ ಅಣಕು ಸ್ಪರ್ಧೆ"**ಗಳನ್ನು ದಿನಾಂಕ 20/12/2016ರೊಳಗೆ ನಡೆಸಿ ಮಾಹಿತಿ ನೀಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ 22/08/2016
2.ಸಂಸದೀಯ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ ಇವರ ಅ.ಸ.ಪತ್ರ ಸಂಖ್ಯೆ:ಸಂವ್ಯಶಾಇ 03 ಯುಸಂಸ್ಪ 2016 ದಿನಾಂಕ 06/10/2016.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2016-17ನೇ ಸಾಲಿಗೆ ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲಾ ಉಪ ನಿರ್ದೇಶಕರು ಪ್ರಥಮ ಪಿಯುಸಿ (ಕಲಾ.ವಾಣಿಜ್ಯ ಮತ್ತು ವಿಜ್ಞಾನ) ವಿದ್ಯಾರ್ಥಿಗಳಿಗೆ ಈ ಕೆಳಕಂಡ ವೇಳಾ ಪಟ್ಟಿಯಂತೆ "ಯುವ ಸಂಸತ್ ಅಣಕು ಸ್ಪರ್ಧೆಗಳನ್ನು" ನಡೆಸಿ ಪ್ರತಿ ಜಿಲ್ಲೆಯಿಂದ ಪ್ರಥಮ ಮತ್ತು ದ್ವಿತೀಯ ಬಹುಮಾನ ಪಡೆದ ಇಬ್ಬರು ವಿದ್ಯಾರ್ಥಿಗಳನ್ನು ನೋಡಲ್ ಅಧಿಕಾರಿಯ ಜೊತೆ ರಾಜ್ಯ ಮಟ್ಟದ ಸ್ಪರ್ಧೆಗಳಿಗೆ ಕಳುಹಿಸಿಕೊಡಲು ತುರ್ತು ಕ್ರಮ ಕೈಗೊಳ್ಳುವುದು.

- ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ಆಯೋಜಿಸಲು ಪ್ರತಿ ಜಿಲ್ಲೆಯ ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಹಿರಿಯ/ಕ್ರಿಯಾಶೀಲ ಪ್ರಾಂಶುಪಾಲರು ಮತ್ತು ರಾಜ್ಯಶಾಸ್ತ್ರದ ಉಪನ್ಯಾಸಕರನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಿ ಈ ಇಲಾಖೆಯಿಂದ ನಿಯೋಜಿತಗೊಂಡ ಅಧಿಕಾರಿಗಳ ಹಾಗೂ ಆಹ್ವಾನಿತ ವಿಧಾನಸಭೆ ಸದಸ್ಯರ ಸಮಕ್ಷಮದಲ್ಲಿ ಸ್ಪರ್ಧೆಗಳನ್ನು ಆಯೋಜಿಸುವುದು.
- **ಪ್ರತಿ ಜಿಲ್ಲೆಯಿಂದ ಕನಿಷ್ಠ 60 ಸ್ಪರ್ಧಾಳುಗಳ ಹೆಸರು, ತರಗತಿ ಹಾಗೂ ಕಾಲೇಜು ವಿವರ ಮತ್ತು 1 ಹಾಗೂ 2ನೇ ಸ್ಥಾನವನ್ನು ಪಡೆದ ವಿಜೇತರ ಹೆಸರು, ತರಗತಿ ಹಾಗೂ ಕಾಲೇಜಿನ ವಿವರ ಹಾಗೂ ಕಾರ್ಯಕ್ರಮದ ಕನಿಷ್ಠ 3 ಭಾವಚಿತ್ರಗಳನ್ನು ಪದವಿ ಪೂರ್ವ ಶಿಕ್ಷಣ ಇಲಾಖೆ/ಸಂಸದೀಯ ವ್ಯವಹಾರಗಳ ಇಲಾಖೆಗೆ ಕಳುಹಿಸತಕ್ಕದ್ದು.**
- ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಡಿಸೆಂಬರ್-2016ರ ಕೊನೆಯ ವಾರದೊಳಗೆ ಆಯೋಜಿಸಲು ಉದ್ದೇಶಿಸಿರುವುದರಿಂದ, ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು 20/12/2016ರೊಳಗೆ ಆಯೋಜಿಸಲು ತುರ್ತು ಕ್ರಮ ತೆಗೆದುಕೊಳ್ಳುವುದು.
- ಸದರಿ ಕಾರ್ಯಕ್ರಮಗಳ ಆಯೋಜನೆ ಬಗ್ಗೆ ಪದವಿ ಪೂರ್ವ ಶಿಕ್ಷಣ ಇಲಾಖೆ/ಸಂಸದೀಯ ವ್ಯವಹಾರಗಳ ಇಲಾಖೆಯ ಗಮನಕ್ಕೆ ತರದೆ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.
- ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದ ಉಪ ನಿರ್ದೇಶಕರುಗಳಿಗೆ ಇಲಾಖೆಯಿಂದ ಅನುದಾನ ಮೊತ್ತವನ್ನು ಬಿಡುಗಡೆ ಮಾಡಲಾಗುವುದಿಲ್ಲ. ಯಾವುದೇ ವ್ಯತ್ಯಯಗಳು ಉಂಟಾದಲ್ಲಿ ಸಂಬಂಧಿಸಿದ ಉಪ ನಿರ್ದೇಶಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಜಂಟಿ ನಿರ್ದೇಶಕರು (ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:
1. ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ ಮುಂದಿನ ಕ್ರಮಕ್ಕಾಗಿ.
2. ಮಾನ್ಯ ನಿರ್ದೇಶಕರ ಆಪ್ತಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ.
3. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ವೆಬ್ ಸೈಟ್‌ಗೆ ಅಳವಡಿಸಲು. / ಕಛೇರಿ ಪ್ರತಿ.